ಮೈಸೂರು ಜಿಲ್ಲೆ ವ್ಯಾಪ್ತಿಯ ಪೋಲೀಸ್ ಠಾಣೆಗಳ ಉನ್ನತೀಕರಣ

2810(4005) ಶ್ರೀ ಗುರುಸ್ವಾಮಿ ಎ.ಎಸ್ (ಚಾಮುಂಡೇಶ್ವರಿ):- ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಮೈಸೂರು ಜಿಲ್ಲೆ ವ್ಯಾಪ್ತಿಯ ಮೇಗಳಾಪುರ, ಕಡಕೊಳ ಹಾಗೂ ಎ.ಪಿ. ಎಂ.ಸಿ. ಯಾರ್ಡ್‌ನಲ್ಲಿನ ಹೊರ ಪೊಲೀಸ್ ಠಾಣೆಗಳನ್ನು ಉನ್ನತೀಕರೀಸುವ ವಿಚಾರ ಸರ್ಕಾರಕ್ಕಿದೆಯೇ?

ಆ) ಹೌದಾದರೆ ಈ ಪ್ರಸ್ತಾವನೆ ಯಾವ ಹಂತದಲ್ಲಿದೆ ಹಾಗೂ ಸಂಬಂಧಿತ ಪ್ರದೇಶದ ಅವಶ್ಯಕತೆಯನ್ನು ಪೂರೈಸಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಇ) ಈ ಪ್ರಸ್ತಾವನೆಯನ್ನು ಕಾರ್ಯಗತಗೊಳಿಸಲು ತಡವಾಗಲು ಕಾರಣವೇನು?

ಈ) ಪ್ರಸ್ತುತ ಹಣಕಾಸು ವರ್ಷದಲ್ಲಿ ಈ ಉದ್ದೇಶಕ್ಕೆ ಎಷ್ಟು ಹಣ ನಿಗದಿಪಡಿಸಲಾಗಿದೆ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)

ಅ) ಮೈಸೂರು ಜಿಲ್ಲೆಯ ಮೆಗಳಾಪುರದಲ್ಲಿನ ಪೊಲೀಸ್ ಹೊರ ಠಾಣೆಯನ್ನು ಪೂರ್ಣ ಪ್ರಮಾಣದ ಪೊಲೀಸ್ ಠಾಣೆಯಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾಪನೆಯು ಸರ್ಕಾರದ ಪರಿಶೀಲನೆಯಲ್ಲಿಲ್ಲ.

ಕಡಕೋಳ ಹಾಗೂ ಎಪಿ ಎಂಸಿ ಯಾರ್ಡ್‌ಗಳಿಗೆ ಪೊಲೀಸ್ ಹೊರ ಠಾಣೆಗಳಿರುವುದಿಲ್ಲವಾದ ಕಾರಣ, ಇವುಗಳನ್ನು ಪೊಲೀಸ್ ಠಾಣೆಗಳಾಗಿ ಉನ್ನತೀಕರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ದೇವಸ್ಥಾನಗಳಿಗೆ ಧಾರ್ಮಿಕ ದತ್ತಿ ಇಲಾಖೆಯಿಂದ ಬಿಡುಗಡೆಯಾದ ಹಣ

2811(3715) ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು):-, ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಧಾರ್ಮಿಕ ದತ್ತಿ ಇಲಾಖೆಯಿಂದ ದೇವಸ್ಥಾನಗಳಿಗೆ ಕರ್ನಾಟಕ ರಾಜ್ಯದಾದ್ಯಂತ ಬಿಡುಗಡೆ ಮಾಡಿದ ಹಣ ಎಷ್ಟು?

ಆ) ಉಡುಪಿ ಜಿಲ್ಲೆಗೆ ಬಿಡುಗಡೆ ಆಗಿರುವ ಹಣ ಎಷ್ಟು?

ಇ) ಕುಂದಾಪುರ ತಾಲ್ಲೂಕಿಗೆ ಬಿಡುಗಡೆ ಆಗಿರುವ ಹಣವೆಷ್ಟು?

ಈ) ಬೈಂದೂರು ವಿಧಾನ ಸಭೆ ಕ್ಷೇತ್ರಕ್ಕೆ ಹಣ ಬಿಡುಗಡೆ ಆಗಿದೆಯೇ?

ಉ) ಇಲ್ಲವಾದಲ್ಲಿ ಕಾರಣ ನೀಡುವುದು?

ಶ್ರೀ ಬಾಬುರಾವ್ ಚಿಂಚನಸೂರ್ (ಮುಜರಾಯಿ ರಾಜ್ಯ ಸಚಿವರು) :

ಅ) 1999-2000ನೇ ಸಾಲಿನಲ್ಲಿ ರಾಜ್ಯಾದ್ಯಂತ ದೇವಾಲಯದ ದುರಸ್ಥಿ, ನವನಿರ್ಮಾಣ, ಆರಾಧನಾ ಯೋಜನೆಯಡಿ ಸರ್ಕಾರವು ಈ ಕೆಳಕಂಡಂತೆ ಹಣ ಬಿಡುಗಡೆ ಮಾಡಿದೆ.

ದುರಸ್ಥಿ/ಜೀರ್ಣೋದ್ಧಾರ	ನವನಿರ್ಮಾಣ	ಆರಾಧನಾ ಯೋಜನೆ
ರೂ. 126 ಲಕ್ಷ	ರೂ. 105 ಲಕ್ಷಗಳು	ರೂ.400.00ಲಕ್ಷ

ಆ) 1999-2000 ನೇ ಸಾಲಿನಲ್ಲಿ ಉಡುಪಿ ಜಿಲ್ಲೆಗೆ ಈ ಕೆಳಕಂಡಂತೆ ಹಣ ಬಿಡುಗಡೆ ಮಾಡಲಾಗಿದೆ.

ದುರಸ್ಥಿ/ಜೀರ್ಣೋದ್ಧಾರ	ನವನಿರ್ಮಾಣ	ಆರಾಧನಾ ಯೋಜನೆ
ರೂ. 3.25 ಲಕ್ಷ	ರೂ.4.50 ಲಕ್ಷಗಳು	ರೂ. 10.43ಲಕ್ಷ

ಇ) 1999-2000 ನೇ ಸಾಲಿನಲ್ಲಿ ಕುಂದಾಪುರ ತಾಲ್ಲೂಕಿಗೆ ಈ ಕೆಳಕಂಡಂತೆ ಹಣ ಬಿಡುಗಡೆ ಮಾಡಲಾಗಿದೆ.

ದುರಸ್ಥಿ	ನವ ನಿರ್ಮಾಣ	ಆರಾಧನಾ ಯೋಜನೆ
ಇಲ್ಲ.	ಇಲ್ಲ	ಕುಂದಾಪುರ ವಿಧಾನ ಸಭಾ ಕ್ಷೇತ್ರಕ್ಕೆ ರೂ. 53452-00

ಈ) 1999-2000 ನೇ ಸಾಲಿನಲ್ಲಿ ಉಡುಪಿ ಜಿಲ್ಲೆಗೆ ಈ ಕೆಳಕಂಡಂತೆ ಹಣ ಬಿಡುಗಡೆ ಯಾಗಿದೆ,

ದುರಸ್ಥಿ	ನವನಿರ್ಮಾಣ	ಆರಾಧನಾ ಯೋಜನೆ
ಇಲ್ಲ	ಇಲ್ಲ	ರೂ. 1,73,912-00

ಉ) ಉದ್ಭವಿಸುವುದಿಲ್ಲ.

ಪಡಿತರ ಚೀಟಿ ವಿತರಣೆ ಕುರುತು

2812(3719) ಶ್ರೀ ಗೋಪಾಲ ಪೂಜಾರಿ ಕೆ.(ಬೈಂದೂರು):- ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಡಿತರ ಚೀಟಿಯನ್ನು ನಾಡಕಛೇರಿಯ ಮುಖಾಂತರ ನೀಡುತ್ತಿರುವುದು ನಿಜವೆ;

ಆ) ಆಹಾರ ಇಲಾಖೆಯು ಪಡಿತರ ಚೀಟಿಯನ್ನು ತಾಲ್ಲೂಕು ಕಛೇರಿ ಮುಖಾಂತರ ನೀಡಲಾಗುತ್ತಿರುವುದು ನಿಜವೇ;

ಇ) ಪಡಿತರ ಚೀಟಿಯನ್ನು ಪಡೆಯಲು ತಾಲ್ಲೂಕು ಕಛೇರಿಗೆ ಅಲೆಯಬೇಕಾಗಿರುವುದರಿಂದ ಇದನ್ನು ಪುನಃ ನಾಡ ಕಛೇರಿಗೆ ವರ್ಗಾಯಿಸಲು ಸರಕಾರ ಕ್ರಮ ಕೈಗೊಳ್ಳುವುದು?